International Journal of Kannada Research
www.kannadajournal.com

ISSN: 2454–5813
IJKR 2022; 8(3): 19-21
© 2022 IJKR
www.kannadajournal.com
Received: 23-05-2022
Accepted: 26-06-2022

**ತ್ರಿವೇಣಿ ಈ ಬನಸೋಡೆ**
ಸಂಶೋಧನಾ ವಿದ್ಯಾರ್ಥಿನಿ
ಕರಾಅಮವಿವಿ ವಿಜಯಪುರ,
ಕರ್ನಾಟಕ, ಭಾರತ

Corresponding Author:
**ತ್ರಿವೇಣಿ ಈ ಬನಸೋಡೆ**
ಸಂಶೋಧನಾ ವಿದ್ಯಾರ್ಥಿನಿ
ಕರಾಅಮವಿವಿ ವಿಜಯಪುರ,
ಕರ್ನಾಟಕ, ಭಾರತ

# ಮಾಲತಿ ಅವರ ಕಾದಂಬರಿಗಳಲ್ಲಿ ಸ್ತ್ರೀ

## ತ್ರಿವೇಣಿ ಈ ಬನಸೋಡೆ

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಸಾಹಿತ್ಯವು ಜನಪ್ರಿಯವು ಮತ್ತು ಗಂಭೀರವು ಆದ ಸಾಹಿತ್ಯ ಪ್ರಕಾರವಾಗಿದೆ. ಕನ್ನಡದಲ್ಲಿ ಈ ಕಾದಂಬರಿ ಸಾಹಿತ್ಯವು ರಚನೆಯಾದದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದಲೇ. ಇಂಗ್ಲೀಷ ವಿದ್ಯಾಭ್ಯಾಸ ಕ್ರಮದ ಮೂಲಕ ಲಭ್ಯವಾದ ಹೊಸ ಓದು, ಹೊಸ ಜಗತ್ತು ಹೊಸ ಆಲೋಚನಾ ವಿಧಾನ ರೂಪಿಸಿಕೊಂಡ ವರ್ಗವೊಂದು ರೂಪಿಸಿತು. ಸ್ತ್ರೀಯರನ್ನು ಕುರಿತಾದ ಉದಾರವಾದಿ ಆಲೋಚನೆಗಳು ಸಾಂಪ್ರದಾಯಿಕ ಬದುಕಿನ ಕ್ರಮವನ್ನು ಪ್ರಶ್ನಿಸುವ, ಚಿತ್ರಿಸುವ ರೀತಿಯಿಂದಲೇ ನವೋದಯ ಸಾಹಿತ್ಯಕ್ಕೆ ತನ್ನ ಕಾಳಜಿಯನ್ನು ವ್ಯಕ್ತಪಡಿಸಿತು. ಶತಮಾನಗಳಿಂದಲೂ ಕತ್ತಲಿನೆಡೆಗೆ ಬದುಕನ್ನು ಚಾಚಿಕೊಂಡಿದ್ದ ಸ್ತ್ರೀ ಜಗತ್ತಿನ ಬವಣೆಗಳಿಗೆ ಪರ್ಯಾಯಗಳನ್ನು ಕೊಡದಿದ್ದರೂ ಸಮಸ್ಯೆಗಳನ್ನು ಚಿತ್ರಿಸುವ ಸುಧಾರಣಾವಾದಿ ನಿಲುವುಗಳನ್ನು ನವೋದಯ ಸಾಹಿತ್ಯ ಪ್ರಕಟಪಡಿಸಿತು.

ಇಪ್ಪತ್ತನೆಯ ಶತಮಾನದ ಘಟ್ಟಗಳಲ್ಲಿ ಲೇಖನ, ಸಂಪಾದಕತ್ವ, ಪ್ರಕಾಶನಗಳ ಮೂಲಕ ಚರಿತ್ರೆಯಿಲ್ಲದ ಮಹಿಳಾ ಸಾಹಿತ್ಯಕ್ಕೆ ಚರಿತ್ರೆ ಕಟ್ಟುವ ಕೆಲಸಗಳು ಆರಂಭವಾದವು ಶ್ರೀಮತಿ ತಿರುಮಲಾಂಬ, ಕಲ್ಯಾಣಮ್ಮ ಮುಂತಾದ ಆರಂಭದ ಘಟ್ಟದ ಲೇಖಕಿಯರು ಕಟ್ಟುವ ಕೆಲಸದ ಹಿನ್ನೆಲೆಯಲ್ಲಿ ಬಹುಮುಖ್ಯರೆನಿಸುತ್ತಾರೆ. ವಿಶೇಷವಾಗಿ ಕನ್ನಡ ಕಥಾಕ್ಷೇತ್ರದಲ್ಲಿ ಸ್ತ್ರೀಪರವಾದ ವೈಚಾರಿಕ ನೆಲೆಗಟ್ಟನ್ನು, ಜೀವನ ಪ್ರೀತಿಯನ್ನು ಉಳ್ಳ ಕಥೆಗಾರ್ತಿಯೆಂದರೆ ಕೊಡಗಿನ ಗೌರಮ್ಮ. ಲಿಂಗ ಸಮಾನತೆಯ ಬಗ್ಗೆ ಸ್ಪಷ್ಟವಾದ ನಿಲುವುಗಳನ್ನು ತೋರಿದ ಕಥೆಗಾರ್ತಿ ಇಂಗ್ಲೀಷ್ ವಿದ್ಯಾಭ್ಯಾಸ ಕ್ರಮದಿಂದ ಹುಟ್ಟಿದ ಹೊಸ ರೀತಿಯ ಆಲೋಚನೆಗಳುಳ್ಳ ತಲೆಮಾರನ್ನು ಚಿತ್ರಿಸುತ್ತಾರೆ.

ಈ ಪ್ರಗತಿಶೀಲ ಸಾಹಿತ್ಯ ಹುಟ್ಟುಹಾಕಿದ ವ್ಯವಸ್ಥೆಯೊಳಗೆ ಸಿಲುಕಿ ಬಿಡುಗಡೆಗಾಗಿ ಹಂಬಲಿಸುವ ವಿಚಾರ ಶಕ್ತಿಯನ್ನು ಉಳ್ಳ ಮಹಿಳೆಯರು ಅಂದು ಬರಹದಲ್ಲಿ ತೊಡಗಿಸಿಕೊಂಡ ಲೇಖಕಿಯರನ್ನು ಆಕರ್ಷಿಸಿದರು. ನೇರವಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಗುರುತಿಸಿಕೊಳ್ಳದಿದ್ದರೂ ನವೋದಯದಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಳ್ಳದಿದ್ದರೂ ಈ ಎರಡರ ಮಧ್ಯೆ ನಿಂತು ಬರೆದ ಲೇಖಕಿಯರಲ್ಲಿ ಮುಖ್ಯರಾದವರು ಎಚ್.ವಿ.ಸಾವಿತ್ರಮ್ಮ, ತ್ರಿವೇಣಿ ಮತ್ತು ಡಾ. ಅನುಪಮ ನಿರಂಜನ ಮುಖ್ಯರಾದವರು. ಮಾಲತಿಯವರ ಸಾಹಿತ್ಯವನ್ನು ಈ ಘಟ್ಟದಲ್ಲಿ ನಿಂತು ನಾವು ಅವಲೋಕಿಸುವುದು ಸೂಕ್ತವೆನಿಸುತ್ತದೆ.

ಮಾಲತಿಯವರ ಬಹುತೇಕ ಕಾದಂಬರಿಗಳ ವಸ್ತು ಕುಟುಂಬವಾಗಿದ್ದು ಕುಟುಂಬ ಜೀವನದ ಸುತ್ತಲೂ ಕಾದಂಬರಿ ಹೆಣೆಯಲ್ಪಡುತ್ತದೆ. ವಿವಾಹ, ದಾಂಪತ್ಯ, ವಿಷಮ ಸಂಬಂಧಗಳು, ಕುಟುಂಬದ ಚೌಕಟ್ಟಿನಲ್ಲಿ ನರಳುವ ಹೆಣ್ಣುಗಳ ವಿವಿಧ ಚಿತ್ರಣ ಸಾಮಾನ್ಯವಾಗಿ ಕಾಣುವ ಅಂಶವಾಗಿದೆ. ಇವರ ಸಾಹಿತ್ಯದ ಮೇಲೆ ಮನೋವಿಜ್ಞಾನ, ತಾವು ಅನುಭವಿಸಿದ ತಾಯ್ತನದ ಹಂಬಲ, ನಿದ್ರಾಹೀನ ಸ್ಥಿತಿಗಳು ಅಲ್ಲಲ್ಲಿ ನೆರಳಾಡುತ್ತವೆ. ಮಾಲತಿ ಆರಂಭದಲ್ಲಿ ಸಣ್ಣ ಕಥೆಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದರೂ ಮುಂದೆ ತಮ್ಮನ್ನು ಕಾದಂಬರಿಗಾರ್ತಿಯಾಗಿಯೇ ಕಂಡುಕೊಂಡರು. ಮಾಲತಿಯವರಿಗಿಂತ ಹಿಂದಿನ ಲೇಖಕಿಯರ ಗಮನ ಸಮಸ್ಯೆಗಳನ್ನು ಗುರುತಿಸುವ ಜನಜಾಗೃತಿಯನ್ನು ಉಂಟು ಮಾಡುವುದರ ಕಡೆಗೆ ಇತ್ತು. ಮಾಲತಿಯವರು ಬರೆದ ಕಾದಂಬರಿಗಳಲ್ಲಿ ಮೂರು ಮನೋವೈಜ್ಞಾನಿಕ ವಸ್ತುವನ್ನೊಳಗೊಂಡಿದ್ದರೆ ಉಳಿದವು ಸ್ವಾತಂತ್ರ್ಯಾ ನಂತರದಲ್ಲಿ ಬದಲಾದ ಹೆಣ್ಣಿನ ಆಲೋಚನಾ ವಿಧಾನ, ಆಯ್ಕೆಗಳು ಹಾಗೂ ಸಮಾಜ ಹಾಗೂ ವ್ಯಯಕ್ತಿಕತೆ ನಿರ್ಧಾರಗಳ ನಡುವಿನ ಘರ್ಷಣೆಗಳನ್ನು ಚಿತ್ರಿಸುತ್ತವೆ.

ಮಾಲತಿಯವರ ಬಹುತೇಕ ಸಾಮಾಜಿಕ ಕಾದಂಬರಿಗಳು ಕುಟುಂಬ ಇಲ್ಲವೇ ಸಮೂಹದ ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿವೆ. ಈ ಎಲ್ಲ ಕಾದಂಬರಿಗಳ ವಸ್ತುಗಳು ಈ ವ್ಯವಸ್ಥೆಗಳ ಜೊತೆಗಿದ್ದು ಒಂಟಿತನ ಅನುಭವಿಸುವ, ಮೌನ ಹೋರಾಟ ನಡೆಸುವ ಆಧುನಿಕ ಪ್ರಜ್ಞೆಯ ಹೆಣ್ಣಿನ ಮೇಲೆ ಕೇಂದ್ರಿಕೃತವಾಗಿವೆ.

ವಸ್ತು ಹೆಣ್ಣನ್ನು ಕುರಿತಾಗಿಯೇ ಇದ್ದು ಇದನ್ನು ಕುಟುಂಬ ಇಲ್ಲವೇ ಸಮೂಹವೆಂಬ ವ್ಯವಸ್ಥೆಗಳ ಮೇಲೆ ಹರಡಿ ಬೆಳೆಸಲಾಗುತ್ತದೆ. ಸ್ವಾತಂತ್ರ್ಯಾನಂತರದ ಬದಲಾದ ಭಾರತದ ಸ್ತ್ರೀ ಸಮಾನತೆ, ಸ್ತ್ರೀ ಶೋಷಣೆ, ಸ್ತ್ರೀ ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತಂತೆ ಇಲ್ಲಿನ ಕಾದಂಬರಿಗಳು ಪ್ರಜ್ಞಾಪೂರ್ವಕವಾಗಿಯೇ ರಚಿತವಾಗಿವೆ.

ಶಿಕ್ಷಣ, ಉದ್ಯೋಗ, ವಿವಾಹ, ಕುಟುಂಬ ವ್ಯವಸ್ಥೆ, ಮಾತೃತ್ವದ ಬಯಕೆ, ವೈಧವ್ಯ ಈ ಎಲ್ಲ ಸ್ತ್ರೀ ಸಂಬಂಧಿತ ವಿಷಯಗಳನ್ನು ಕೆಲವೆಡೆ ನಿವಾರಿಸಿಕೊಳ್ಳಬೇಕಾದ ಸಮಸ್ಯೆಗಳೆಂಬಂತೆ, ಇನ್ನೂ ಕೆಲವಡೆ ಪ್ರತಿರೋಧವೆಂಬಂತೆ ಮತ್ತೆ ಕೆಲವೆಡೆ ಹಕ್ಕುಗಳ ಪ್ರತಿಪಾದನೆಯೆಂಬಂತೆ ಮಾಲತಿ ನಿರೂಪಿಸಿದ್ದಾರೆ. ಆದರೆ ಈ ಪ್ರತಿರೋಧಗಳು, ಹಕ್ಕೊತ್ತಾಯಗಳು ಪ್ರಧಾನಧಾರೆಯೆಂಬಂತೆ ಚಿತ್ರಿತಗೊಳ್ಳದೆ ದಾರಿಯಲ್ಲಿನ ಕಶ್ಮಲಗಳನ್ನು ಸದ್ದಿಲ್ಲದೆ ತೊಳೆದು ನಿರ್ಮಲಗೊಳಿಸುವ ಗಂಗಾಪ್ರವಾಹದಂತೆ ಶಾಂತ ಗಂಭೀರವಾಗಿ ಹರಿದು ಸಾಗಿಹೋಗುತ್ತವೆ.

ಮಾಲತಿಯವರ ಸ್ತ್ರೀಕೇಂದ್ರಿತ ಸಾಮಾಜಿಕ ಕಾದಂಬರಿಗಳನ್ನು ಅವು ಒಳಗೊಳ್ಳುವ ಅಗಾಧ ಅನುಭವಗಳು ಹಾಗೂ ಅಲ್ಲಿನ ಪಾತ್ರಗಳ ಮನೋಲೋಕಗಳು ವೈವಿಧ್ಯತೆಯಿಂದ ಕೂಡಿವೆ. ಮಾಲತಿಯವರ ಸಾಮಾಜಿಕ ಕಥಾವಸ್ತುವನ್ನುಳ್ಳ ಮುಖ್ಯ ಕಾದಂಬರಿಗಳೆಂದರೆ ನೂಪುರಗಾನ, ಹೊಸಹೆಜ್ಜೆ, ಪುನರ್ಮಿಲನ, ಸರಿದತೆರೆ, ಅಲೋಕ, ತಿರುಗಿದ ಚಕ್ರ, ಮಿನುಗದ ಚುಕ್ಕೆ, ಖಾಲಿಮನೆ, ಅಂಜನಾ, ಅರ್ಧಾಂಗಿ, ಮಂದಾರ, ವಕ್ರರೇಖೆ, ಹಸಿರು ಚಿಗುರು, ಪುಣ್ಯದಎಣ್ಣೆ ಮುಂತಾದವು.

ವಿವಿಧ ವರ್ಗಗಳಿಗೆ ಸೇರಿದ ಹೆಣ್ಣುಮಕ್ಕಳು ಎದುರಿಸುವ ಹಲವು ಸಮಸ್ಯೆಗಳು ಹಲವು ಮುಖಗಳನ್ನು ಮಾಲತಿಯವರ ಕಾದಂಬರಿಗಳು ಚಿತ್ರಿಸುತ್ತವೆ. ಸಮಸ್ಯೆಗಳಿಲ್ಲದೆ ಸುಖದಿಂದ ಜೀವಿಸುವ ಸ್ತ್ರೀಯರನ್ನು ಮಾಲತಿ ತೀರಾ ಅಪರೂಪವೆಂಬಂತೆಯೇ ಚಿತ್ರಿಸಿದ್ದಾರೆ. ಅಂಜನಾ ಕಾದಂಬರಿಯಲ್ಲಿ ಗಂಡನ ನಪುಂಸಕತನವೇ ಕಾರಣವಾಗಿ ಮಕ್ಕಳಾಗದಿದ್ದ ಸಂದರ್ಭದಲ್ಲಿ ತನ್ನ ಮನಸ್ಸಿಗೊಪ್ಪದ ರೀತಿಯಲ್ಲಿ ಪರಪುರುಷನಿಂದ ಮಗು ಪಡೆಯಲು ಪ್ರೇರೆಪಿಸುವ ಪತಿಯ ಮನೆಯವರ ವಿರುದ್ಧ ಸಿಡಿದು ನಿಲ್ಲುವ ಹೆಣ್ಣಿನ ಮನಸ್ಸಿನ ತಾಕಲಾಟಗಳನ್ನು ಬಿಂಬಿಸುವ ಕಾದಂಬರಿ ಇದಾಗಿದೆ. ಹೆಣ್ಣಿಗೆ ವಿವಾಹವೇ ಅಂತಿಮವಲ್ಲ; ಅದನ್ನೂ ಮೀರಿಯೂ ಆಕೆ ತನ್ನತನವನ್ನು ಬೆಳೆಸಿಕೊಳ್ಳಬಲ್ಲಳು; ಸಮಾಜವನ್ನು ಸಶಕ್ತಗೊಳಿಸಲು ಮಹತ್ವದ ಕೊಡುಗೆಯನ್ನು ನೀಡಬಲ್ಲಳು ಎಂಬುದನ್ನು ಖಾಲಿಮನೆಯ ಕುಮುದಾಳ ಪಾತ್ರದಲ್ಲಿ ಮಾಲತಿಯವರು ತೆರೆದಿಟ್ಟಿದ್ದಾರೆ. ಗಂಡನಮನೆಯ ಬಡತನದ ಬದುಕನ್ನು ತನ್ನ ದುಡಿಮೆಯಿಂದ ಸಂಭಾಳಿಸಿ ಸಾಧಿಸಲು ಹೋರಾಡುವ ಶಾಂಭವಿಯ ದಿಟ್ಟತನ ಮಿನುಗದ ಚುಕ್ಕೆ ಕಾದಂಬರಿಯಲ್ಲಿ ಕಾಣುತ್ತೇವೆ. ಗಂಡು ಹೆಣ್ಣನ್ನು ವಯೋಸಹಜವಾಗಿ ಕಾಡುವ ಆಕರ್ಷಣೆಯಿಂದ ಸಂಕಷ್ಟಕ್ಕೆ ಸಿಲುಕುವವರು ಇನ್ನ್ಯಾರೋ. ಅವರನ್ನು ಸಮಾಜ ಸ್ವೀಕರಿಸುವುದಿಲ್ಲ. ವಿವಾಹ ಪೂರ್ವದಲ್ಲಿ ಗಣಪಿ ಮತ್ತು ಶ್ರೀಹರಿಪ್ರಸಾದರ ನಡುವೆ ಮೂಡಿದ ಆಕರ್ಷಣೆಯ ಫಲವಾಗಿ ಗಣೇಶ ಹುಟ್ಟುತ್ತಾನೆ. ಗಣಪಿ ಬೇರೋಂದು ಮದುವೆಯಾಗುತ್ತಾಳೆ. ಮುಂದೊಂದು ದಿನ ತನ್ನ ತಾಯಿ ಯಾರೆಂದು ತಿಳಿದುಕೊಂಡ ಗಣೇಶ ಅವಳನ್ನು ಹುಡುಕಿಕೊಂಡು ಹೋಗುವ ಚಿತ್ರಣ ಇಲ್ಲಿ ಕಾಣುತ್ತೇವೆ. ಕುಟುಂಬದ ಒಳಗೆ ಒಬ್ಬ ವ್ಯಕ್ತಿಯ ಪಾತ್ರಗಳು ವಿಭಿನ್ನವಾಗಿರುತ್ತವೆ. ಆ ಪಾತ್ರಗಳಿಗೆ ಅನುಗುಣವಾಗಿ ಕಾಲಕ್ಕೆ ತಕ್ಕಂತೆ ಅವರ ಚಹರೆಗಳು ಕೂಡ ಬದಲಾಗುತ್ತವೆ. ಭಾಗೀರಥಿ ತನ್ನ ಪತಿ ಮಂಜುನಾಥಯ್ಯ ಬದುಕಿದ್ದಾಗ ತನ್ನ ಹಠಮಾರಿತನದ ಸ್ವಭಾವದಿಂದ ಎಲ್ಲರನ್ನೂ ತನ್ನ ಮನಸ್ಸಿಗೆ ತಕ್ಕಂತೆ ಅಧಿಕಾರದಿಂದ ಆಡಿಸಿದಾಕೆ. ತನ್ನ ಅತ್ತೆ ಅತ್ಯಂತ ಸಂಕಷ್ಟದಲ್ಲಿದ್ದಾಗಲೂ ತನ್ನ ಜೊತೆ ಕರೆತಂದು ಇರಿಸಿಕೊಳ್ಳದಷ್ಟು ನಿಷ್ಠುರತನ ತೋರಿದವಳು. ತನ್ನ ಇಳಿವಯಸ್ಸಿನಲ್ಲಿ ಅನಿವಾರ್ಯವಾಗಿ ಮಕ್ಕಳ ಆಶ್ರಯದಲ್ಲಿ ಇರಬೇಕಾಗುತ್ತದೆ. ಈ ರೀತಿಯಾಗಿ ಹೆಣ್ಣಿನ ಸೂಕ್ಷ್ಮ ಎಳೆಗಳನ್ನು ಮಾಲತಿ ತಮ್ಮ ಕಾದಂಬರಿಯಲ್ಲಿ ಅನಾವರಣಗೊಳಿಸಿದ್ದಾರೆ. ಅತೃಪ್ತೆ ಕಾದಂಬರಿಯ ನಾಯಕಿ ಉಮಾ ವೈವಾಹಿಕ ಬದುಕಿಗೆ ಇನ್ನೂ ಮಾನಸಿಕವಾಗಿ ಅನುವಾಗದ ಸ್ಥಿತಿಯಲ್ಲಿರುವಾಗ ಹಸೆಮಣೆಯನ್ನೇರಬೇಕಾಗಿ ಬರುತ್ತದೆ. ಪತಿಯೊಂದಿಗಿನ ಅಸಹಜ ನಡವಳಿಕೆಯಿಂದಾಗಿ ಅವಳ ವಿವಾಹ ಜೀವನ ಛಿದ್ರಗೊಳ್ಳುತ್ತದೆ. ಕಾಲಾಂತರದಲ್ಲಿ ಅವಳ ಮನಸ್ಸು ಗಂಡನ ಸಾಹಚರ್ಯದ ವಿಚಾರದಲ್ಲಿ ಪಕ್ವಗೊಳ್ಳುತ್ತದೆ. ಅವನನ್ನು ಅವಳು ಬಯಸುವ ಆ ವೇಳೆಗಾಗಲೇ ಅವಳ ಪತಿ ಬೇರೆ ಮದುವೆಯಾಗಿರುತ್ತಾನೆ. ಇಡೀ ಕಾದಂಬರಿಯು ಉಮಾಳ ಮಾನಸಿಕ ಸ್ಥಿತ್ಯಂತರದ ತಲ್ಲಣಗಳನ್ನು ಹಿಡಿದಿಟ್ಟಿದೆ. ಈ ಕಾದಂಬರಿಯ ವಸ್ತು ಹಲವು ಆಯಾಮಗಳಲ್ಲಿ ಚಿತ್ರಿತವಾಗುವ ಸಾಧ್ಯತೆಗಳನ್ನು ಹೊಂದಿದೆಯಾದರೂ ಎಪ್ಪತ್ತರ ದಶಕದಲ್ಲಿ ಮಾಲತಿ ಅವರು ಇಂಥ ವಸ್ತುವನ್ನು ನಿರ್ವಹಿಸಿದ್ದು ಮಹತ್ವದ ವಿಚಾರವೆನಿಸುತ್ತದೆ. ಈ ಕಾದಂಬರಿಯ ಉಮಾ ಹಾಗೂ ಪುಷ್ಪವಲ್ಲಿಯ ಪಾತ್ರಗಳ ಮೂಲಕ ಒಂದೇ ವ್ಯಕ್ತಿತ್ವದ ಒಳ ಹೊರ ಮುಖಗಳ ಹೊಯ್ದಾಟದ ಚಿತ್ರಣವನ್ನು ಒಳಗೊಂಡಿದೆ. ಆಘಾತದ ಆಶಾ ಮಾನಸಿಕ ಆಘಾತಕ್ಕೆ ಒಳಗಾಗುವುದರ ಜೊತೆಗೆ ತಿರಸ್ಕಾರವನ್ನು ಎದುರಿಸುವ ಸನ್ನಿವೇಶವನ್ನು ಲೇಖಕಿ ಕಟ್ಟಿಕೊಟ್ಟಿದ್ದಾರೆ. ಕಾದಂಬರಿಯ ವಸ್ತು ಸ್ತ್ರೀ ಸಂವೇದನೆಯುಳ್ಳದ್ದಾದರೂ, ಸಾಂಪ್ರದಾಯಿಕ ಆವರಣದ ಚಿತ್ರಣ ಇಲ್ಲಿ ಮುಖ್ಯವಾಗಿ ಅಭಿವ್ಯಕ್ತಪಡಿಸಿದ್ದಾರೆ. ಸಶಕ್ತ ಕುಟುಂಬದ ನಿರ್ಮಾಣ ಹೆಣ್ಣಿಗೆ ಜವಾಬ್ದಾರಿ ಎಂಬ ಪಿತೃಪ್ರಧಾನ ಸಮಾಜದ ಚಿಂತನೆಯನ್ನು ಈ ಕಾದಂಬರಿ ಒರೆಗೆ ಹಚ್ಚುತ್ತದೆ. 'ತಾಯಿಯೇ ಮಗುವಿನ ಮೊದಲ ಗುರು' ಎಂಬ ನಾಣ್ಣುಡಿಗಳು ಈ ಮನೋಧರ್ಮದ ಹಿನ್ನೆಲೆಯಲ್ಲೇ ಹುಟ್ಟಿಕೊಂಡಿವೆ. ಇದಕ್ಕೆ ಪೂರಕವಾಗಿ ಇಲ್ಲಿ ಬರುವ ತಾಯಿಯ ಪಾತ್ರ ಭವಾನಿಯ ಮೂಲಕ ಅನಾವರಣಗೊಳಿಸಿದ್ದಾರೆ.

ಮೇಲೆ ವಿಶ್ಲೇಷಿದ ಕಾದಂಬರಿಗಳಲ್ಲದೆ ಮನೋವೈಜ್ಞಾನಿಕ ತಳಹದಿಯ ಮೇಲೆ ಬರೆದ ಅರ್ಧಾಂಗಿ, ಆಘಾತ, ಅತೃಪ್ತೆಗಳಂತಹ ಕಾದಂಬರಿಗಳು ಹಲವು ಕಥೆಗಳನ್ನು ಮಾಲತಿ ರಚಿಸಿದ್ದಾರೆ. ಮಾಲತಿಯವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಕಥೆ, ಕಾದಂಬರಿ, ಜೀವನ ಚರಿತ್ರೆ, ವೈಚಾರಿಕ ಕೃತಿಗಳು, ಆತ್ಮಕಥೆ ಹೀಗೆ ಹಲವಾರು ರೀತಿಯ ಕೃತಿಗಳನ್ನು ರಚಿಸಿದ್ದಾರೆ. ಮಹಿಳೆಯರ ಸಮಸ್ಯೆಗಳನ್ನೇ ಪ್ರಧಾನವಾಗಿರಿಸಿಕೊಂಡು ಅವರಲ್ಲಿ ವಿಶೇಷ ಅರಿವನ್ನುಂಟುಮಾಡುವ ಸಲುವಾಗಿ ಬರೆದ ದಿವ್ಯಪಥ, ಸುಖದ ಹಾದಿ, ಸಮಯದ ಸದುಪಯೋಗ, ಮಕ್ಕಳಪಾಲನೆ, ಮಹಿಳೆ–ಸಮಾಜ ಕಲ್ಯಾಣ ಈ ಕೃತಿಗಳನ್ನು ಮರೆಯುವಂತಿಲ್ಲ. ಇಷ್ಟೆಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಮಾಲತಿ ಬರೆದಿದ್ದರೂ ಅವರು ಎದ್ದು ಕಾಣುವುದು ಕಾದಂಬರಿ ಸಾಹಿತ್ಯದಲ್ಲಿ. ಮಾಲತಿಯವರ ಕಾದಂಬರಿಗಳಲ್ಲಿ ಪುರುಷ ಪಾತ್ರಗಳಿಗಿಂತ ಸ್ತ್ರೀ ಪಾತ್ರಗಳೇ ಹೆಚ್ಚು ಗಮನಾರ್ಹವಾಗಿವೆ. ನಾಯಕ ಪಾತ್ರ ಪ್ರಧಾನವಾದ ಕಾದಂಬರಿಗಳಿಗಿಂತ ಭಿನ್ನವಾಗಿ ಮಾಲತಿ ಅವರು ಕೃತಿ ರಚಿಸಿರುವುದರಿಂದ ಇಲ್ಲಿನ ಪಾತ್ರ ಸೃಷ್ಟಿಯೂ ನಾಯಕ, ಖಳನಾಯಕ ಸಂಸ್ಕೃತಿಯನ್ನು ಮೀರಿ ಬದುಕಿನ ವಾಸ್ತವ ಸತ್ಯಗಳನ್ನು ಯಥಾವತ್ತಾಗಿ ಹೇಳಲು ಪ್ರಯತ್ನಿಸುತ್ತದೆ.

ಮಾಲತಿ ಅವರ ಕಾದಂಬರಿಗಳು, ಮಹಿಳೆಯರ ಸಮಸ್ಯೆಗಳತ್ತ ಹೆಚ್ಚು ಬೆಳಕು ಚೆಲ್ಲಿವೆ. ಹೆಣ್ಣಿಗೆ ಶತಮಾನಗಳಿಂದ

ಶೋಷಣೆಯಾಗಿದೆಯೆಂಬುದಂತೂ ಸತ್ಯ. ಆದರೆ ಇಲ್ಲಿ ಲೇಖಕಿ ಆ ಶೋಷಣೆಯನ್ನು ಹೇಳುವಲ್ಲಿ, ರೊಚ್ಚನ್ನು ಹುಟ್ಟಿಸದೆ, ಸೇಡನ್ನು ಬೆಳೆಸದೆ ಕಾರುಣ್ಯವನ್ನು ಪ್ರಕಟಿಸುತ್ತಾರೆ. ಪ್ರತಿಭಟನೆಯ ಅಂಶವಿದ್ದರೂ ಅದು ಸೇಡಿನ ಜ್ವಾಲೆಯಲ್ಲ. ಹೋರಾಟದ ಮಾತು ಬಂದರೂ ಅದು ಹಿಂಸೆಯನ್ನುಂಟುಮಾಡುವ ಹೊಡೆದಾಟವಾಗುವುದಿಲ್ಲ. ಹೆಣ್ಣಿಗೆ ಶೋಷಣೆಯಾಗಿದೆಯೆಂದು ತಿಳಿದು ಕೇವಲ ಗಂಡಸರನ್ನು ದೂಷಿಸುವುದಿಲ್ಲ. ಗಂಡು ಹೆಣ್ಣುಗಳಲ್ಲಿ ಮೇಲು ಕೀಳುಗಳೇ ಇಲ್ಲವೆಂದು ಸ್ಪಷ್ಟಪಡಿಸುವ ಲೇಖಕಿ ಇವರಿಬ್ಬರಿಗೂ ಸಮಸ್ಯೆಯಾಗಿ ಕಾಡುವ ಈ ವ್ಯವಸ್ಥೆಯನ್ನು ಪ್ರಶ್ನಿಸುವತ್ತ ಓದುಗರ ಗಮನ ಹರಿಸುತ್ತಾರೆ. ಆದ್ದರಿಂದಲೇ ಮಾಲತಿ ವಿಶಿಷ್ಟ ರೀತಿಯ ಸಾಹಿತಿಯಾಗಿ ಕಾಣುತ್ತಾರೆ.

ಮಾಲತಿಯವರ ಕಾದಂಬರಿಗಳಲ್ಲಿ ಸಹಜವಾಗಿಯೇ ಮಹಿಳೆಯರು ಕೇಂದ್ರಸ್ಥಾನದಲ್ಲಿದ್ದಾರೆ. ಅವರ ಮಾನಸಿಕ ಸ್ತರ ಹಲವು ಕಡೆಗಳಲ್ಲಿ ಮುನ್ನೆಲೆಗೆ ಬಂದಿವೆ. ಹಾಗೆಂದ ಮಾತ್ರಕ್ಕೆ ಪುರುಷ ವಿರೋಧಿ ಧೋರಣೆಗಳಾಗಲೀ ಕುರುಡಾದ ಸ್ತ್ರೀಪರವಾದ ವಾದವಾಗಲೀ ಕಾದಂಬರಿಗಳಲ್ಲಿ ಎಲ್ಲೂ ವ್ಯಕ್ತವಾಗಿಲ್ಲ. ಎಲ್ಲ ಕ್ಷೇತ್ರಗಳಲ್ಲಿ ಇರುವ ಲಿಂಗಸಂಬಂಧಿಯಾದ ರೋಗಗ್ರಸ್ಥ ಧೋರಣೆಗಳಿಗೆ ಪುರುಷರಷ್ಟೇ ಮಹಿಳೆಯರೂ ಹೊಣೆಗಾರರು ಎಂಬುದನ್ನು ಇವು ಪ್ರತಿಪಾದಿಸಿವೆ.

**ಪರಾಮರ್ಶನ ಗ್ರಂಥಗಳು**


1. ಖಾಲಿಮನೆ
2. ವಕ್ರರೇಖೆ
3. ಅಂಜನಾ
4. ಮಿನುಗದ ಚುಕ್ಕೆ
5. ಹೊಸಹೆಜ್ಜೆ